ಇರುತ್ತಿ. ನಿನ್ನೆಯ ನಿನ್ನ ಬದಲಾವಣೆ ನಿನಗೇ ಮೆರಗು ನೀಡಿದ್ದ ಗಮನಿಸಿದೆಯಾ. ಅದೆಷ್ಟು ಹುಡುಕಾಟ ಆ ನಿನ್ನ ಬಟ್ಟಲು ಕಂಗಳಲಿ. ಎಂಥವರಿಗೂ ನಿನ್ನನ್ನು ನೋಡಿ ಉತ್ಸಾಹ ಪುಟಿಯದೇ ಇರಲಾರದು. ನಮ್ಮ ಪಕ್ಕದಲ್ಲೇ ಅದೆಷ್ಟೋ ಮಿಂಚುವ ನಕ್ಷತ್ರಗಳಿದ್ದರೂ ಅದರಿರುವಿಕೆಯ ತಿಳಿಯಲು ನಾವು ಕಪ್ಪನೆಯ ರಾತ್ರಿಗಾಗಿಯೇ ಏಕೆ ಕಾಯುತ್ತೀವಿ? ಸಂಬಂಧಗಳ ಸಿಹಿ ಸೊಲ್ಲ ಸವಿಯದೇ ಅದು ಕಹಿಯಾಗುವವರೆಗೂ ಏಕೆ ಕದಡುತ್ತೀವಿ? ಹೀಗೆ, ಇನ್ನೂ ನಿನ್ನ ಬಳಿ ಏನೇನೋ ಕೇಳಬೇಕೆನಿಸುತ್ತಿದೆ.

ಇತಿ, ನೀ ಅರಸುವ ಕೃಷ್ಣನೆಂದು ಭಾವಿಸುವ...'

ಯಾರಿವರು? ನಿಜಕ್ಕೂ ನನ್ನ ಅರಿಯಬಲ್ಲವರೆನಿಸುತ್ತಿದೆ. ಯಾರಿರಬಹುದು? ರಾಘವ? ಅವನೆಡೆಗೆ ನೋಡುತ್ತಿದ್ದಂತೆ ನನ್ನತ್ತ ನೋಡಿದ. ಇವನು ಇಷ್ಟೆಲ್ಲಾ ಭಾವುಕನೆಂದು ನನಗೆಂದೂ ಅನಿಸಿಲ್ಲ. ಅವನೇ ಆಗಿದ್ದರೆ, ನನ್ನ ಮನಸು ಅವನನ್ನೊಪ್ಪಲು ಸಾಧ್ಯವೇ ಇಲ್ಲ. ಆಗಿನ್ನೂ ಅಷ್ಟೇನೂ ಪರಿಚಯವಿಲ್ಲದಿದ್ದರೂ, ನೇರವಾಗಿ ನನ್ನ ಬಳಿ ಬಂದು, 'ಇದ್ಯಾಕೆ ಇಷ್ಟೊಂದ್ ಲೂಸಾಗಿರೊ ಬಟ್ಟೆ ಹಾಕೊಂಡಿದಿಯಾ?' ಏನು ಪ್ರತಿಕ್ರಿಯಿಸುವುದೆಂದು ತಿಳಿಯದೆ ಪೆದ್ದಿಯಂತೆ ಅಸಹಜವಾಗಿ ನಕ್ಕಿದ್ದೆ. ಇನ್ನೊಮ್ಮೆ ಬಾಸ್‌ನ ಚೇಂಬರ್‌ನಿಂದ ಏನೋ ಬೇಸರದಲ್ಲಿ ಹೊರ ಬಂದಾಗ 'ಈ ಡ್ರೆಸ್ ತುಂಬಾ ಚೆನ್ನಾಗಿದೆ' ಎಂದಿದ್ದ. 'ಇಟ್ಸ್ ನನ್ ಆಫ್ ಯುವರ್ ಬಿಸಿನೆಸ್' ಉರಿದುಬಿದ್ದಿದ್ದೆ. ಅಂದಿನಿಂದ ಇವನೆಂದರೆ ಏನೋ ಕಸಿವಿಸಿ.

ಮರು ಮುಂಜಾನೆ ಸ್ವಾಗತಕ್ಕೆನ್ನುವಂತೆ ಟೇಬಲಿನ ಮೇಲೊಂದು ಪತ್ರವಿತ್ತು.

'ಪ್ರೀತಿಯ ರಾಧಾ,

ಯಾಕೆ ಸುಮ್ಮನಾಗಿಬಿಟ್ಟೆ? ಪ್ರತಿಕ್ರಿಯೆಯೇ ಇಲ್ಲ! ರಾತ್ರಿ ನಿದ್ದೆಯೇ ಬರುತ್ತಿಲ್ಲ. ಇಷ್ಟು ದಿನ ಸಹಜತೆಯ ಗಾಳಿಯ ತುಂಬಿಕೊಂಡಿದ್ದ ನನ್ನ ಹೃದಯವನ್ನ ಈ ಪ್ರೀತಿಯು ಸಣ್ಣ ಸಣ್ಣ ಸೂಜಿಗಳಿಂದ ಚುಚ್ಚಿ ಹುಣ್ಣಾಗಿಸಿದೆ. ಹೀಗೇ ಆದಲ್ಲಿ ಪ್ರಾಣಹತ್ಯೆಗೂ ಕಾರಣವಾಗಬಹುದೇನೋ.

ಇತಿ ನೀ ಅರಸುವ ಕೃಷ್ಣನಾಗಬಯಸುವ...'

ರಾಘವಾ!! ನಿನ್ನನ್ನೆತ್ತಿ ಬಿಸಾಡುತ್ತೇನೆ. ಸೀದಾ ಅವನ ಟೇಬಲ್ ಬಳಿ ಹೊರಟೆ.

'ಏನಂದ್ಕೊಂಡಿದಿಯಾ ನನ್ನ! ಹಾ! ಪ್ರಾಣ ಕಳ್ಕೊತಿಯಾ, ಕಳ್ಕೊ ನೋಡೋಣ. ನೀನಂದ್ರೆ ನಂಗಿಷ್ಟವಿಲ್ಲಾಂತ ಗೊತ್ತಿದ್ರೂ, ಸುಮ್ನೆ ಟ್ರೈ ಮಾಡೋಣ, ಸಿಕ್ರೂ ಸಿಕ್ತಾಳೆ ಅಂತ ಪತ್ರ ಬರೀತಿದಿಯಾ? ಅಂದಚೆಂದ ಬಟ್ಟೆಬರೆ ಅಂತ ಸಾಯ್ತೀಯ. ನನ್ ಮನ್ಸಿನ್ ಬಗ್ಗೆ ನಿಂಗೇನ್ ಗೊತ್ತು.' ತಿರುಗಿ ಬರುವಾಗ ಎಲ್ಲರ ಮುಖಗಳನ್ನು ನೋಡಿ ನಾನು ಮಿತಿಮೀರಿದ್ದು ಗೊತ್ತಾಯಿತು. ರಾಘವ ದುಃಖಪೂರಿತ ಮೆಲುದನಿಯಲ್ಲಿ,

'ಸಾರಿ ರಾಧಾ, ನಿನ್ನ ಇಷ್ಟ ಪಟ್ಟಿದ್ದು ನಿಜ. ನೀನೂ ಮುಂದೆ ಇಷ್ಟಪಡ್ತೀಯ ಅನ್ಕೊಂಡಿದ್ದೆ. ಆದ್ರೆ ಟ್ರೈ ಮಾಡೋಕೆ ಅಂತ ಯಾವ್ ಲೆಟರೂ ಬರೀಲಿಲ್ಲ. ಅದರ ಬಗ್ಗೆ ನಂಗೇನೂ ಗೊತ್ತಿಲ್ಲ' ಜೋರಾಗಿ ಅಳುತ್ತಾ ಕುಳಿತುಬಿಟ್ಟ. ಅಯ್ಯೋ ಏನೀ ಸಂಕಟ! ಇನ್ಯಾರು? ಹಾ! ಅವರೇ ಅವರೇ!

ಚೇಂಬರ್ ಒಳ ಹೋದಂತೆ ಅದೇ ಮರ್ಯಾದೆ.

'ಬೇಡ. ನಿಮ್ಮ ಮರ್ಯಾದೆ ಸಾಕಾಗಿದೆ ನಂಗೆ, ನಾನು ನಿಮ್ಮನೆಂದೂ ಪ್ರೀತಿಸಿಲ್ಲ. ಎಷ್ಟು ಸಾರಿ ಹೇಳೋದು ನಿಮಗೆ. ನನ್ನನ್ನು ಬಿಡಿ.'

'ನೋಡು ರಾಧಾ, ಐ ಡೋಂಟ್‌ನೋ ಎನಿತಿಂಗ್. ಬಟ್ ಆಮ್ ಲವಿಂಗ್ ಯೂ.'

'ಇದರಿಂದ ನಿಮಗೇ ತೊಂದ್ರೆ. ಕಡಿದ ಸಂಬಂಧ ಒಡೆದ ಗಾಜು ಒಂದೇನೇ.'